ಕರ್ನಾಟಕ ಸರ್ಕಾರ
ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ
C/o, ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಒಂದನೇ ಮಹಡಿ, ಬಹು ಮಹಡಿಗಳ ಕಟ್ಟಡ, ಡಾ|| ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560 001,ಕರ್ನಾಟಕ
**E-mail ID:** icps.kar@gmail.com **Ph.No.080-22879381/82**

ಸಂಖ್ಯೆ: ಕಎಸ್ಐಸಿಪಿಎಸ್/ತೆ.ತಂಗು/ಅನುದಾನ-07/2017-18 ದಿನಾಂಕ:03.08.2018

**ಸುತ್ತೋಲೆ**

ವಿಷಯ: ತೆರೆದ ತಂಗುದಾಣಗಳಲ್ಲಿ ಮಕ್ಕಳನ್ನು ಹೆಚ್ಚಿನ ಅವಧಿಗೆ ಇರಿಸಿಕೊಳ್ಳುವ ಕುರಿತು.

ಉಲ್ಲೇಖ: ಸಮಕಡತ ಪತ್ರ ಸಂಖ್ಯೆಯ ಸುತ್ತೋಲೆ ದಿನಾಂಕ:07.02.2018

******

ತೆರೆದ ತಂಗುದಾಣವು ರಕ್ಷಣೆ ಮತ್ತು ಪೋಷಣೆಯ ಅಗತ್ಯವಿರುವ ನಗರ/ಅರೆನಗರ ಪ್ರದೇಶದ ಮಕ್ಕಳಿಗೆ ಇರುವ ತಾತ್ಕಾಲಿಕ ವ್ಯವಸ್ಥೆ ಮಾತ್ರ, ರಕ್ಷಣೆ ಮತ್ತು ಪೋಷಣೆ ಅಗತ್ಯವಿರುವ ಮಗುವನ್ನು ಗುರುತಿಸಿದ ತಕ್ಷಣ ಅದರ ವೈಯಕ್ತಿಕ ಕಡತ (Individual Care File) ತೆರೆದು ಮಗುವನ್ನು ಮಕ್ಕಳ ಕಲ್ಯಾಣ ಸಮಿತಿ ಮುಂದೆ ಹಾಜರುಪಡಿಸಿ, ಅಭಿರಕ್ಷಣಾ ಅವಧಿಯನ್ನು ಕಡ್ಡಾಯವಾಗಿ ನಮೂದಿಸುವುದನ್ನು ಖಚಿತಪಡಿಸಿಕೊಳ್ಳುವುದು ಎಂಬ ಅಂಶವನ್ನು ಉಲ್ಲೇಖಿತ ಸುತ್ತೋಲೆಯಲ್ಲಿ ತಿಳಿಸಲಾಗಿದೆ. ತೆರೆದ ತಂಗುದಾಣಕ್ಕೆ ದಾಖಲಾದ ಮಕ್ಕಳು 9 ತಿಂಗಳಿಗಿಂತ ಅಧಿಕಾವಧಿಗೆ ಇರುವಂತಿಲ್ಲ ಎಂದು ಸುತ್ತೋಲೆಯಲ್ಲಿ ನಮೂದಿಸಿದ್ದು, ಇದರರ್ಥ ದಾಖಲಾದ ಎಲ್ಲಾ ಮಕ್ಕಳು ಕಡ್ಡಾಯವಾಗಿ ತೆರೆದ ತಂಗುದಾಣದಲ್ಲಿ 9 ತಿಂಗಳವರೆಗೆ ಇರಿಸಲು ಅವಕಾಶವಿದೆಯೆಂದಲ್ಲ. ವಿಶೇಷ ಸಂದರ್ಭಕ್ಕೆ 1 ಅಥವಾ 2 ಮಕ್ಕಳಿಗೆ ಅನ್ವಯಿಸತಕ್ಕದ್ದು. ತೆರೆದ ತಂಗುದಾಣಗಳು ತಾತ್ಕಾಲಿಕ ಪುನರ್ವಸತಿ ಕೇಂದ್ರವಾಗಿದ್ದು, ಮಕ್ಕಳನ್ನು ಮುಖ್ಯವಾಹಿನಿಗೆ ತರಲು ಸಜ್ಜುಗೊಳಿಸುವ ಮುಖ್ಯ ಜವಾಬ್ದಾರಿ ಹೊಂದಿರುತ್ತದೆ. ಇವು ದೀರ್ಘಾವಧಿ ಆಶ್ರಯ ತಾಣಗಳಲ್ಲ. ಮಗುವಿಗೆ ಅಗತ್ಯವಿರುವ ಸಂಪರ್ಕ ಶಿಕ್ಷಣ ನೀಡುವ ಮೂಲಕ ಮಗುವಿನ ಪುನರ್ವಸತಿ ಕುರಿತು ಸೂಕ್ತ ನಿರ್ಣಯ ತೆಗೆದುಕೊಳ್ಳುವುದು.

ಮಗುವನ್ನು ಶಿಕ್ಷಣಕ್ಕೆ ಸಿದ್ಧಪಡಿಸಿ ಶಾಲೆಗೆ ದಾಖಲಿಸಬಹುದು ಎಂದು ನಿರ್ಣಯಿಸಿದ್ದಲ್ಲಿ, ಪೋಷಕರೊಂದಿಗೆ ಚರ್ಚಿಸಿ ಮನೆಯ ಹತ್ತಿರವಿರುವ ಶಾಲೆಗೆ ದಾಖಲಿಸಿ, ಮಗುವನ್ನು ಮನೆಗೆ ಕಳುಹಿಸಿ, ಅನುಸರಣೆ ಮಾಡುವುದು.

ಮಗು ಮನೆಯಲ್ಲಿ ಇದ್ದು ವಿದ್ಯಾಭ್ಯಾಸ ಮುಂದುವರೆಸಲು ಸಾಧ್ಯವಿಲ್ಲವಾದಲ್ಲಿ, ಮಕ್ಕಳ ಕಲ್ಯಾಣ ಸಮಿತಿ ಮುಂದೆ ತಂದು ದೀರ್ಘಾವಧಿ ಪುನರ್ವಸತಿಗಾಗಿ ಬಾಲಮಂದಿರ/ ಅರ್ಹ ಸಂಸ್ಥೆಗೆ ದಾಖಲಿಸುವ ಬಗ್ಗೆ ಕ್ರಮಕೈಗೊಳ್ಳುವುದು.

ಮಗು ಶಾಲೆಗೆ ದಾಖಲಿಸಲು ಸಾಧ್ಯವಿಲ್ಲವಾಗದಿದ್ದಲ್ಲಿ ಕೌಶಲ್ಯಾಭಿವೃದ್ಧಿ/ ವೃತ್ತಿ ತರಬೇತಿಗೆ ಸಂಪರ್ಕ ಕಲ್ಪಿಸುವುದು. 9 ತಿಂಗಳಿಗಿಂತ ಹೆಚ್ಚಿನ ಅವಧಿಯ ತರಬೇತಿಗೆ ದಾಖಲಿಸಿದ್ದಲ್ಲಿ, ಅಂತಹ ಮಕ್ಕಳನ್ನು ಮಕ್ಕಳ ಕಲ್ಯಾಣ ಸಮಿತಿ ಮುಂದೆ ತಂದು ಬಾಲಮಂದಿರಗಳಲ್ಲಿ ದಾಖಲಿಸಿ ತರಬೇತಿ ಮುಂದುವರೆಸುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು.

ಸದಸ್ಯ ಕಾರ್ಯದರ್ಶಿಗಳು,
ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ
ಸೊಸೈಟಿ, ಬೆಂಗಳೂರು.

**ಪ್ರತಿಯನ್ನು:**

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಎಲ್ಲಾ ಜಿಲ್ಲೆಗಳು ಇವರಿಗೆ ಮಾಹಿತಿಗಾಗಿ.

covering letter

Scanned by CamScanner